

بسم اللهِ الرّحمٰن الرّحيم

# ದುಆ: ಪೂರ್ವಾಪೇಕ್ಷಿತಗಳು ಮತ್ತು ಶಿಷ್ಟಾಚಾರ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **16-12-2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ದುಆದ ಕುರಿತು ಅನೇಕರು ಪ್ರಶ್ನಿಸುತ್ತಾರೆ. ನಾಸ್ತಿಕತೆಯನ್ನು ಬೆಂಬಲಿಸುವವರು ದುಆ ಮತ್ತು ದೇವನ ಅಸ್ತಿತ್ವದ ಕುರಿತು ಯೋಜನಾಬದ್ಧವಾಗಿ ಆಕ್ಷೇಪವೆತ್ತುತ್ತಾರೆ. ಮನುಷ್ಯನನ್ನು ಧರ್ಮ ಮತ್ತು ದೇವನಿಂದ ದೂರ ಮಾಡಲು ಪ್ರಯತ್ನ ಮಾಡಲಾಗುತ್ತಿದೆ. ಇಂತಹ ಸ್ಥಿತಿಗಳಲ್ಲಿ ನಮ್ಮ ಜನರಲ್ಲೂ ಕೆಲವೊಮ್ಮೆ ಈ ಪೈಶಾಚಿಕ ಆಲೋಚನೆಗಳು ಪ್ರಭಾವ ಬೀರುತ್ತವೆ. ಕಡಿಮೆ ಅರಿವುಳ್ಳ ಜನರ ಹೃದಯಗಳಲ್ಲಿ ಸಂಶಯಗಳು ಏಳುತ್ತವೆ. ಸಣ್ಣ ಸಣ್ಣ ಪರೀಕ್ಷಣೆಯ ಪರಿಣಾಮವಾಗಿ ಅಲ್ಲಾಹನ ಅಸ್ತಿತ್ವ ಮತ್ತು ಅವನು ಪ್ರಾರ್ಥನೆಗಳನ್ನು ಆಲಿಸುತ್ತಾನೆ ಎಂಬುದರ ಬಗ್ಗೆ ಆಕ್ಷೇಪಗಳು ಏಳುತ್ತವೆ.

ಇಂದು ನಾನು ದುಆದ ವಿಷಯವನ್ನು ಹಝ್ರತ್ ಮಸೀಹ್ ಮೌಊದ್[ಅ]ರ ಉಪದೇಶಗಳ ಬೆಳಕಿನಲ್ಲಿ ವಿವರಿಸುವೆನು. ಅವರ ಲಿಖಿತಗಳಲ್ಲಿ ದುಆದ ಸತ್ಯಾವಸ್ಥೆ, ಪ್ರಾರ್ಥನೆ ಮಾಡುವಾಗ ಗಮನದಲ್ಲಿಡಬೇಕಾದ ಮರ್ಯಾದೆಗಳು, ನಮ್ಮ ಹೊಣೆಗಾರಿಕೆಗಳು, ದುಆದ ಆವಶ್ಯಕತೆ ಮತ್ತು ಅಲ್ಲಾಹನ ಮೇಲಿನ ದೃಢವಿಶ್ವಾಸದ ಕುರಿತು ಬಹಳಷ್ಟು ವಿವರಣೆಗಳು ಇವೆ. ಕಷ್ಟದ ಅವಸ್ಥೆಗಳಲ್ಲಿ ನಾವು ಮಾಡುವ ದುಆಗಳು ಸ್ವೀಕಾರಗೊಳ್ಳುವಂತಾಗಲು ಸುಖದ ಸಮಯಗಳಲ್ಲೂ ನಮಗೆ ದುಆ ಮಾಡುವುದರ ಬಗ್ಗೆ ಗಮನವಿರಬೇಕು ಎಂಬುವುದಕ್ಕೆ ಸಂಬಂಧಪಟ್ಟು ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಯಾವುದಾದರೂ ವಿಪತ್ತು ಬರುವಾಗ ದೇವನಿಗೆ ಭಯಗೊಳ್ಳುವ ರೀತಿಯಲ್ಲೇ ನೆಮ್ಮದಿಯ ಸ್ಥಿತಿಯಲ್ಲೂ ದೇವನಿಗೆ ಭಯಗೊಳ್ಳುವವನ ಮೇಲೆ ಅಲ್ಲಾಹನ ಕಾರುಣ್ಯವಿರುತ್ತದೆ. ಯಾವನು ನೆಮ್ಮದಿಯ ಸಮಯದಲ್ಲಿ ಅಲ್ಲಾಹನನ್ನು ಮರೆತು ಬಿಡುವುದಿಲ್ಲವೋ ಅವನನ್ನು ಅಲ್ಲಾಹನು ವಿಪತ್ತಿನ ಸಮಯದಲ್ಲಿ ಕಡೆಗಣಿಸುವುದಿಲ್ಲ. ಯಾವನು ನೆಮ್ಮದಿಯ ಸಂದರ್ಭದಲ್ಲಿ ಐಷಾರಾಮವಾಗಿ ಜೀವನ ಸಾಗಿಸಿಕೊಂಡು ವಿಪತ್ತಿನ ಸಮಯದಲ್ಲಿ ದುಆ ಮಾಡುತ್ತಾನೋ ಅವನ ದುಆಗಳು ಸ್ವೀಕಾರಗೊಳ್ಳುವುದಿಲ್ಲ. ವಿಪತ್ತುಗಳು ಬಂದೆರಗುವಾಗ ಪಶ್ಚಾತ್ತಾಪದ ಬಾಗಿಲು ಮುಚ್ಚಲ್ಪಡುತ್ತದೆ.

ದುಆ ಮಾಡುವಾಗ ಮನುಷ್ಯನ ಸ್ಥಿತಿ ಹೇಗಿರಬೇಕು ಮತ್ತು ದುಆದ ಮರ್ಯಾದೆಗಳೇನು ಎಂಬುದನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಅಲ್ಲಾಹನೊಡನೆ ಬೇಡುವಾಗ ಮರ್ಯಾದೆಯನ್ನು ಪಾಲಿಸಬೇಕು ಎಂಬುದು ಕಡ್ಡಾಯವಾದ ಸಂಗತಿಯಾಗಿದೆ. ಯಾವುದಾದರೂ ವಸ್ತುವನ್ನು ಒಬ್ಬ ರಾಜನಿಂದ ಬೇಡುವಾಗ ಬುದ್ಧಿವಂತನು ಶಿಷ್ಟತೆಯನ್ನು ಗಮನದಲ್ಲಿರಿಸುತ್ತಾನೆ. ಆದ್ದರಿಂದಲೇ ಹೇಗೆ ಬೇಡಬೇಕೆಂಬುವುದನ್ನು ಅಲ್ಲಾಹನು ಸೂರಃ ಫಾತಿಹದಲ್ಲಿ ಕಲಿಸಿಕೊಟ್ಟಿದ್ದಾನೆ. ಆದ್ದರಿಂದಲೇ **ಅಲ್‌ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್** ಎಂದು ಹೇಳಬೇಕೆಂದು ಕಲಿಸಿಕೊಟ್ಟಿದ್ದಾನೆ. ಅದರ ಅರ್ಥ: ಸಕಲ ಸ್ತುತಿಗಳು ಸರ್ವ ಲೋಕಗಳ ಪ್ರಭುವಾದ ಅಲ್ಲಾಹನಿಗೆ ಮಾತ್ರ ಸಲ್ಲುತ್ತವೆ; **ಅರ್ರಹ್‌ಮಾನ್** ಅವನು ಬೇಡದೇ ಮತ್ತು ಯಾಚಿಸದೇ ದಯಪಾಲಿಸುವವನಾಗಿದ್ದಾನೆ. **ಅರ್ರಹೀಂ** ಯಥಾರ್ಥ ಪ್ರಯತ್ನಕ್ಕೆ ಸರಿಯಾದ ಉತ್ತಮ ಪ್ರತಿಫಲಗಳನ್ನು ನೀಡುವವನೂ ಆಗಿದ್ದಾನೆ.

ಹುಝೂರ್ ಹೇಳಿದರು: 'ಯಥಾರ್ಥ ಪ್ರಯತ್ನ' ಅಥವಾ ಸರಿಯಾದ ಪ್ರಯತ್ನ ಎಂಬ ಪದದ ಕುರಿತು ಚಿಂತಿಸಬೇಕಾಗಿದೆ. ಸರಿಯಾದ ಪರಿಶ್ರಮದ ಮಟ್ಟವು ಅಲ್ಲಾಹನು ಸ್ವತಃ ವಿವರಿಸಿ ಕೊಟ್ಟಿದ್ದಾಗಿರುತ್ತದೆ. ಎಂದರೆ ಕಠಿಣವಾದ ಪ್ರಯತ್ನ ಮಾಡಬೇಕಾಗುತ್ತದೆ. ಅನಂತರ **ಮಾಲಿಕಿ ಯೌಮಿದ್ದೀನ್** ಎಂದು ಹೇಳಬೇಕೆಂದು ಕಲಿಸಿ ಕೊಟ್ಟಿದ್ದಾನೆ. ಎಂದರೆ, ಇಹಲೋಕದಲ್ಲೂ ಪರಲೋಕದಲ್ಲೂ ಶಿಕ್ಷೆ ಅಥವಾ ರಕ್ಷೆ ನೀಡುವವನು ಅವನೇ ಆಗಿದ್ದಾನೆ. ಇಷ್ಟೆಲ್ಲ ಸ್ತುತಿಗಳನ್ನು ಮನುಷ್ಯನು ಮಾಡುವಾಗ, ಮನುಷ್ಯನ ಪ್ರಭು ಎಷ್ಟು ದೊಡ್ಡವನು ಎಂದು ಆತನಿಗೆ ಅರಿವಾಗುತ್ತದೆ. ಅನಂತರ ಅಲ್ಲಾಹನು ತನ್ನ ಮುಂದಿದ್ದಾನೆ ಎಂಬ ರೀತಿಯಲ್ಲಿ ಯಾಚಕನು ಹೇಳುತ್ತಾನೆ – **ಇಯ್ಯಾಕ ನಅ್‌ಬುದು ವ ಇಯ್ಯಾಕ ನಸ್ತಈನ್** ಎಂದರೆ, ನಾವು ನಿನ್ನನ್ನೇ ಆರಾಧಿಸುತ್ತೇವೆ ಅಥವಾ ಆರಾಧಿಸಲು ಬಯಸುತ್ತೇವೆ ಮತ್ತು ನಿನ್ನಿಂದಲೇ ಸಹಾಯವನ್ನು ಯಾಚಿಸುತ್ತೇವೆ. **ಇಹ್‌ದಿನಸ್ಸಿರಾತಲ್ ಮುಸ್ತಖೀಮ್, ಸಿರಾತಲ್ಲಧೀನ ಅನ್‌ಅಮ್‌ತ ಅಲೈಹಿಂ** ವಕ್ರತೆಯಿಲ್ಲದಂತಹ ನೇರವಾದ ಮಾರ್ಗದಲ್ಲಿ ನಮ್ಮನ್ನು ನಡೆಸು. ಒಂದು ಮಾರ್ಗ ಕುರುಡರದ್ದಾಗಿರುತ್ತದೆ. ಆ ಮಾರ್ಗದಲ್ಲಿ ಪರಿಶ್ರಮ ಮಾಡುವುದರಿಂದ ಯಾವುದೇ ಪರಿಣಾಮ ಉಂಟಾಗುವುದಿಲ್ಲ. ಯಾವ ಮಾರ್ಗದಲ್ಲಿ ನಡೆಯುವುದರಿಂದ ಅನುಗ್ರಹ ಲಭಿಸುತ್ತದೋ ಅದೇ ನೇರವಾದ ಮಾರ್ಗವಾಗಿರುತ್ತದೆ. **ಗೈರಿಲ್ ಮಗ್‌ಝೂಬಿ ಅಲೈಹಿಂ ವಲಝ್ಝಾಲ್ಲೀನ್** ಎಂದರೆ, ನಿನ್ನ ಕೋಪಕ್ಕೆ ಈಡಾದವರ ಮತ್ತು ದಾರಿಗೆಟ್ಟವರ ಮಾರ್ಗದಲ್ಲಿ ನಡೆಸಬೇಡ ಎಂದು ಹೇಳಬೇಕು. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ನೇರವಾದ ಮಾರ್ಗದಲ್ಲಿ ನಡೆಸು ಎಂಬುದರಲ್ಲಿ ಲೌಕಿಕ ಮತ್ತು ಧಾರ್ಮಿಕವಾದ ಎಲ್ಲ ಮಾರ್ಗಗಳನ್ನು ಉದ್ದೇಶಿಸಲಾಗಿದೆ. ಯಾವ ರೀತಿಯಲ್ಲಿ ಅತ್ಯುನ್ನತನಾದ ಅಲ್ಲಾಹನಿಗೆ ಯಾವುದೇ ಎಲ್ಲೆಗಳಿಲ್ಲವೋ ಅದೇ ರೀತಿಯಲ್ಲಿ ಅವನ ಪದವಿಗಳು ಮತ್ತು ಔನತ್ಯಗಳಿಗೆ ಯಾವುದೇ ಮಿತಿಯಿಲ್ಲ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ದುಆ ಎಂಬುದು ಬಹಳ ವಿಸ್ಮಯಕರವಾದ ಸಂಗತಿಯಾಗಿದೆ. ಆದರೆ ದುಃಖಕರವಾದ ವಿಷಯವೇನೆಂದರೆ, ಈ ಕಾಲದಲ್ಲಿ ಬೇರೆಯವರಿಂದ ದುಆ ಮಾಡಿಸುವವನಿಗೂ ದುಆ ಮಾಡುವವನಿಗೂ ದುಆದ ಶಿಷ್ಟಾಚಾರಗಳ ಮತ್ತು ದುಆ ಸ್ವೀಕಾರದ ವಿಧಾನಗಳ ಬಗ್ಗೆ ಅರಿವಿಲ್ಲ. ಸತ್ಯವೇನೆಂದರೆ, ದುಆದ ಸತ್ಯಾವಸ್ಥೆಯ ಬಗ್ಗೆ ಮನುಷ್ಯನು ಪೂರ್ಣವಾಗಿಯೂ ಅಪರಿಚಿತನಾಗಿ ಬಿಟ್ಟಿದ್ದಾನೆ.

ದುಆ ಮಾಡುವವನು ಸಹನೆಯನ್ನು ಕೈಗೊಳ್ಳಬೇಕು ಎಂಬುದರ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ನೋಡಿರಿ, ದುಆದ ಸ್ಥಿತಿಯು ಒಬ್ಬ ರೈತ ಹೊರಗೆ ಹೋಗಿ ತನ್ನ

ಹೊಲದಲ್ಲಿ ಬೀಜವನ್ನು ಬಿತ್ತುವ ಹಾಗೆಯೇ ಆಗಿರುತ್ತದೆ. ಬಾಹ್ಯವಾಗಿ ನೋಡುವುದಾದರೆ, ಆತನು ಒಂದು ಉತ್ತಮ ಬೀಜವನ್ನು ಹೊರಗೆ ಮಣ್ಣಿನಡಿಯಲ್ಲಿ ಹೂತಿದ್ದಾನೆ ಎಂದು ತೋರುತ್ತದೆ. ಆದರೆ ಅದು ಯಾವಾಗ ಫಲವನ್ನು ನೀಡುತ್ತದೆ ಎಂದು ಒಬ್ಬ ಬುದ್ಧಿವಂತ ರೈತನಿಗೆ ಗೊತ್ತಿರುತ್ತದೆ. ಆತನು ತಾಳ್ಮೆಯಿಂದ ಅದರ ಮೇಲ್ನೋಟ ವಹಿಸುತ್ತಾನೆ ಮತ್ತು ಗಮನವಿಟ್ಟು ಅದರ ಪಾಲನೆ ಪೋಷಣೆ ಮಾಡುತ್ತಾನೆ. ಹಾಗೆ ಅದರ ಫಲ ನೀಡುವ ಸಮಯ ಬಂದು ಬಿಡುತ್ತದೆ ಮತ್ತು ಅದು ಪಕ್ವವಾಗುತ್ತದೆ. ದುಆದ ಸ್ಥಿತಿಯೂ ಇದೇ ಆಗಿದೆ.

ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಾನು ನನ್ನ ಅನುಭವದಿಂದ ನೋಡಿದ್ದೇನೆ ಮತ್ತು ಹಿಂದಿನ ಸಜ್ಜನರ ಅನುಭವಗಳು ಕೂಡ ಅದಕ್ಕೆ ಸಾಕ್ಷ್ಯವಹಿಸುತ್ತದೆ. ಅದೇನೆಂದರೆ, ಯಾವುದಾದರೂ ವಿಷಯದಲ್ಲಿ ದುಆ ಮಾಡುವಾಗ ದೀರ್ಘ ಕಾಲ ಉತ್ತರ ಸಿಗುವುದಿಲ್ಲವೆಂದಾದರೆ, ಯಶಸ್ಸು ಲಭಿಸುವುದು ಎಂದು ಪ್ರತೀಕ್ಷೆ ಇರುತ್ತದೆ. ಬಲಹೀನನಾದ ಮನುಷ್ಯನು ಒಂದು ದೀರ್ಘ ಕಾಲ ದೇವನ ಸನ್ನಿಧಿಯಲ್ಲಿ ಬಂದು ನಿಂತಿದ್ದಾನೆ ಎಂಬುದನ್ನು ಕಾರುಣ್ಯನಿಧಿಯೂ ಲಜ್ಜೆಯಿರುವವನೂ ಆದ ಅಲ್ಲಾಹನು ನೋಡುವಾಗ ಅಂಥವನ ಸ್ಥಿತಿಯನ್ನು ಅಲ್ಲಾಹನು ಎಂದಿಗೂ ಕೆಟ್ಟದ್ದಾಗಿ ಮಾಡುವುದಿಲ್ಲ. ಗರ್ಭಿಣಿಯಾದ ಮಹಿಳೆಯೊಬ್ಬಳು ನಾಲ್ಕೈದು ತಿಂಗಳ ನಂತರವೂ ಮಗುವೇಕೆ ಹುಟ್ಟುತ್ತಿಲ್ಲವೆಂದು ಯೋಚಿಸಿಕೊಂಡು ಬೇಗನೇ ಮಗು ಹುಟ್ಟಬೇಕೆಂಬ ಆಸೆಯಲ್ಲಿ ಯಾವುದಾದರೂ ಪ್ರಸವದ ಮಾತ್ರೆಯನ್ನು ಸೇವಿಸಿದರೆ ಮಗು ಹುಟ್ಟಲು ಸಾಧ್ಯವೇ? ಆಕೆ ಒಂದು ನಿರಾಶಾಜನಕ ಅವಸ್ಥೆಯಲ್ಲಿ ಸ್ವತಃ ಸಿಲುಕಿದಂತಾಗುವುದಿಲ್ಲವೇ? ಅದೇ ರೀತಿಯಲ್ಲಿ ಯಾವನು ಸಮಯಕ್ಕೆ ಮುಂಚಿತವಾಗಿಯೇ ಅವಸರಪಡುತ್ತಾನೋ ಆತನು ನಷ್ಟವನ್ನು ಅನುಭವಿಸುತ್ತಾನೆ. ನಷ್ಟ ಮಾತ್ರವಲ್ಲ, ಬದಲಾಗಿ ಸತ್ಯವಿಶ್ವಾಸಕ್ಕೂ ಧಕ್ಕೆಯುಂಟಾಗುತ್ತದೆ. ಕೆಲವರು ಇಂತಹ ಸ್ಥಿತಿಯಲ್ಲಿ ನಾಸ್ತಿಕರಾಗುತ್ತಾರೆ.

ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನೋಡಿರಿ, ಹಝ್‌ರತ್ ಇಬ್ರಾಹೀಂ(ಅ) ಒಂದು ದುಆವನ್ನು ಮಾಡಿದ್ದರು. ಅವರ ಸಂತಾನದಲ್ಲಿ ಅರೇಬಿಯದಲ್ಲಿ ಪ್ರವಾದಿಯೊಬ್ಬರು ಆಗಮಿಸಬೇಕೆಂದಾಗಿತ್ತು ಆ ದುಆ. ಏನು, ಅದು ತಕ್ಷಣವೇ ಸ್ವೀಕಾರಗೊಂಡಿತೇ? ಇಬ್ರಾಹೀಂ ಅಲೈಹಿಸ್ಸಲಾಮರ ನಂತರ ಒಂದು ದೀರ್ಘ ಕಾಲದ ವರೆಗೂ ಆ ದುಆದ ಪ್ರಭಾವ ಏನಾಗಿದೆ ಎಂಬುದುರ ಬಗ್ಗೆ ಯಾರಿಗೂ ಆಲೋಚನೆ ಕೂಡ ಉಂಟಾಗಿರಲಿಲ್ಲ. ಆದರೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದೊಂದಿಗೆ ಆ ದುಆ ಬಹಳ ವೈಭವಶಾಲಿಯಾದ ರೀತಿಯಲ್ಲಿ ಈಡೇರಿಸಲ್ಪಟ್ಟಿತು.

ದುಆ ಸ್ವೀಕಾರಗೊಳ್ಳಲು ದೇಹ ಮತ್ತು ಆತ್ಮದ ಸಂಬಂಧ ಹೇಗಿರಬೇಕು ಎಂಬುದಕ್ಕೆ ಸಂಬಂಧಿಸಿ ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಬಾಹ್ಯವಾದ ನಮಾಝ್ ಮತ್ತು ಉಪವಾಸದೊಂದಿಗೆ ನಿಷ್ಠೆ ಮತ್ತು ಪ್ರಾಮಾಣಿಕತೆ ಇಲ್ಲದಿದ್ದರೆ ಅದರಲ್ಲಿ ಯಾವುದೇ ಗುಣವಿಲ್ಲ. ಯೋಗಿಗಳು ಮತ್ತು ಸನ್ಯಾಸಿಗಳು ಕೂಡ ತಮ್ಮ ಜಾಗಗಳಲ್ಲಿ ಹಿರಿದಾದ ಪರಿಶ್ರಮಗಳನ್ನು ಮಾಡುತ್ತಾರೆ. ಆದರೆ ಈ ಕಷ್ಟತೆಗಳು ಅವರಿಗೆ ಯಾವುದೇ ಪ್ರಕಾಶ ಮತ್ತು ನೆಮ್ಮದಿಯನ್ನು ನೀಡುವುದಿಲ್ಲ. ಅವರು ದೈಹಿಕವಾದ ಕಠಿಣ ಪರಿಶ್ರಮಗಳನ್ನು ಮಾಡುತ್ತಾರೆ. ಆದರೆ ಅವುಗಳಿಗೆ ಅಂತರಂಗದೊಂದಿಗೆ ಬಹಳ ಕಡಿಮೆ ಸಂಬಂಧವಿರುತ್ತದೆ. ಅವುಗಳಿಂದ ಅವರ ಆತ್ಮದ ಮೇಲೆ ಯಾವುದೇ ಪ್ರಭಾವ ಉಂಟಾಗುವುದಿಲ್ಲ. ಆದರೆ ನಿಮ್ಮ ಕುರ್ಬಾನಿಗಳ ಮಾಂಸ ಮತ್ತು ರಕ್ತ ಅಲ್ಲಾಹನಿಗೆ ತಲುಪುವುದಿಲ್ಲ, ಬದಲಾಗಿ ದೇವಭಕ್ತಿ ತಲುಪುತ್ತದೆ ಎಂದು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳಿರುವನು. ಸತ್ಯದಲ್ಲಿ ಅಲ್ಲಾಹನು ಸಿಪ್ಪೆಯನ್ನು ಇಷ್ಟಪಡುವುದಿಲ್ಲ. ಬದಲಾಗಿ ತಿರುಳನ್ನು ಬಯಸುತ್ತಾನೆ. ಮಾಂಸ ಮತ್ತು ರಕ್ತ ತಲುಪುವುದಿಲ್ಲವೆಂದಾದರೆ, ಕುರ್ಬಾನಿಯ ಆವಶ್ಯಕತೆಯೇನು? ಅದೇ ರೀತಿಯಲ್ಲಿ ನಮಾಝ್ ಮತ್ತು ಉಪವಾಸ ಆತ್ಮಕ್ಕೆ ಆಗಿವೆ ಎಂದಾದರೆ, ಬಾಹ್ಯ ರೂಪದ ಆವಶ್ಯಕತೆಯೇನು ಎಂಬೀ ಪ್ರಶ್ನೆಗಳು ಏಳುತ್ತವೆ. ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಿಶ್ಚಿತವಾದ ಸಂಗತಿಯೇನೆಂದರೆ, ಯಾರು ದೈಹಿಕವಾದ ಸೇವೆಗಳನ್ನು ಮಾಡುವುದಿಲ್ಲವೋ ಅವರ ಆತ್ಮಗಳು ಕೂಡ ವಿಮುಖತೆ ತೋರಿಸುತ್ತವೆ. ಅಂಥವರಲ್ಲಿ ಯಥಾರ್ಥವಾಗಿ ಇರಬೇಕಾದ ವಿನಯ ಮತ್ತು ಆರಾಧನಾ ಭಾವ ಉಂಟಾಗುವುದಿಲ್ಲ. ಅದೇ ರೀತಿಯಲ್ಲಿ ಕೇವಲ ದೈಹಿಕ ಶ್ರಮಕ್ಕೆ ಒತ್ತುಕೊಟ್ಟು ಆತ್ಮವನ್ನು ಅದರೊಂದಿಗೆ ಸೇರಿಸದವರು ಕೂಡ ಅಪಾಯಕರವಾದ ತಪ್ಪಲ್ಲಿ ಸಿಲುಕುತ್ತಾರೆ. ದೇಹ ಮತ್ತು ಆತ್ಮದ ನಡುವೆ ಅಲ್ಲಾಹನು ಪರಸ್ಪರ ಸಂಬಂಧವನ್ನು ಇರಿಸಿದ್ದಾನೆ. ದೇಹದ ಪ್ರಭಾವ ಆತ್ಮದ ಮೇಲೆ ಉಂಟಾಗುತ್ತದೆ. ಉದಾಹರಣೆಗೆ ಒಬ್ಬ ವ್ಯಕ್ತಿ ನಾಟ್ಯವಾಗಿ ಅಳಲು ಪ್ರಯತ್ನಿಸಿದರೆ, ಆತನಿಗೆ ಅಳು ಖಂಡಿತ ಬರುವುದು. ಅದೇ ರೀತಿಯಲ್ಲಿ, ನಮಾಝ್‌ನಲ್ಲಿ ನಿಲ್ಲುವುದು, ಬಾಗುವುದು ಎಂಬೀ ಕೃತ್ಯಗಳನ್ನು ಮಾಡುವಾಗ ಅವುಗಳ ಪ್ರಭಾವ ಆತ್ಮದ ಮೇಲೂ ಆಗುತ್ತದೆ. ದೈಹಿಕವಾಗಿ ತೋರಿಸುವಷ್ಟೇ ವಿನಯವು ಆತ್ಮಕ್ಕೂ ಉಂಟಾಗುತ್ತದೆ. ಅಲ್ಲಾಹನು ಕೇವಲ ಸಜದಗಳನ್ನು ಸ್ವೀಕಾರ ಮಾಡುವುದಿಲ್ಲವಾದರೂ ಸಜದಕ್ಕೆ ಆತ್ಮದೊಂದಿಗೆ ಒಂದು ಸಂಬಂಧವಿರುತ್ತದೆ. ಆದ್ದರಿಂದಲೇ ನಮಾಝಿನಲ್ಲಿ ಅತ್ಯುನ್ನತವಾದ ಸ್ಥಾನ ಸಜದಕ್ಕೆ ಆಗಿದೆ. ಮನುಷ್ಯನು ತನ್ನ ವಿನಯವಂತಿಕೆಯ ಅಂತಿಮ ಸ್ಥಾನವನ್ನು ತಲುಪುವಾಗ ಸಾಷ್ಟಾಂಗವನ್ನು ಮಾಡಲು ಬಯಸುತ್ತಾನೆ. ಒಟ್ಟಿನಲ್ಲಿ, ದೇಹಕ್ಕೆ ಆತ್ಮದೊಂದಿಗೆ ಒಂದು ವಿಶಿಷ್ಟವಾದ ಸಂಬಂಧವಿದೆ.

ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಮಾಝಿನಲ್ಲಿ ಅನುಭೂತಿ ಲಭಿಸುತ್ತಿಲ್ಲವೆಂದು ಕೆಲವರು ಹೇಳುತ್ತಾರೆ: ಆದರೆ ಅನುಭೂತಿ ಎಂಬುದು ನಮ್ಮ ನಿಯಂತ್ರಣದಲ್ಲಿಲ್ಲವೆಂದು ಅವರಿಗೆ ಗೊತ್ತಿಲ್ಲ. ಅದಲ್ಲದೇ ಆ ರುಚಿಯ ಮಟ್ಟವು ಬೇರೆಯೇ ಆಗಿದೆ. ಕೆಲವೊಮ್ಮೆ ವ್ಯಕ್ತಿಯೊಬ್ಬನು ಕಠಿಣ ಮಟ್ಟದ ಕಷ್ಟದಲ್ಲಿ ಸಿಲುಕುತ್ತಾನೆ. ಆದರೆ ಆ ಕಷ್ಟತೆಯನ್ನು ಕೂಡ ಅನುಭೂತಿಯೆಂದು ಭಾವಿಸುತ್ತಾನೆ. ಸಕಲ ಸವಿ ಮತ್ತು ಆರಾಮ ದುಃಖದ ನಂತರವೇ ಬರುತ್ತವೆ. ಆದ್ದರಿಂದಲೇ **ಇನ್ನ ಮಅಲ್ ಉಸ್ರಿ ಯುಸ್ರ** ಎಂಬ ನಿಯಮವನ್ನು ಪವಿತ್ರ ಖುರ್‌ಆನ್ ಮುಂದಿರಿಸಿದೆ. ಎಂದರೆ ಕಷ್ಟತೆಯೊಂದಿಗೆ ಸುಖವಿದೆ. ಯಾವುದಾದರೂ ಸುಖದ ಮುಂಚೆ ಕಷ್ಟತೆ ಇರದಿದ್ದರೆ ಸುಖ ಸುಖವಾಗಿ ಅನುಭವವಾಗುವುದಿಲ್ಲ. ಆದ್ದರಿಂದ ನಮಗೆ ಆರಾಧನೆಯ ಅನುಭೂತಿ ಲಭಿಸುವುದಿಲ್ಲವೆಂದು ಹೇಳುವವರು ತಮ್ಮ ಆರಾಧನೆಗಾಗಿ ಎಷ್ಟು ದುಃಖ ಮತ್ತು ಕಷ್ಟತೆಗಳನ್ನು ಸಹಿಸುತ್ತಾರೆ ಎಂದು ಮೊದಲು ಯೋಚಿಸಬೇಕಾಗಿದೆ. ಎಷ್ಟರ ಮಟ್ಟಿಗೆ ಮನುಷ್ಯನು ಕಷ್ಟತೆಗಳನ್ನು ಸಹಿಸುತ್ತಾನೋ ಅಷ್ಟರ ಮಟ್ಟಿಗೆ ಅವೇ ತಮ್ಮ ರೂಪಗಳನ್ನು ಬದಲಾಯಿಸಿ ನಂತರ ಅನುಭೂತಿಯಾಗುತ್ತವೆ. ಮನುಷ್ಯನು ತನ್ನನ್ನು ತಾನೇ ಅನಾವಶ್ಯಕವಾದ ಕಷ್ಟತೆಗಳಿಗೆ ಹಾಕಿಕೊಂಡು ಉಂಟಾಗುವ ಅಥವಾ

ತನಗೆ ಎತ್ತಲು ಸಾಧ್ಯವಲ್ಲದಂತಹ ಕಷ್ಟತೆಗಳನ್ನು ಎತ್ತಿ ಉಂಟಾಗುವ ದುಃಖಗಳ ಬಗ್ಗೆ ನಾನು ಹೇಳುತ್ತಿಲ್ಲ. ಬದಲಾಗಿ ನಾನು ಹೇಳಿದುದರ ಉದ್ದೇಶವೇನೆಂದರೆ, ಸಮಯಕ್ಕೆ ಸರಿಯಾಗಿ ನಮಾಝ್‌ಗಳನ್ನು ಅವುಗಳ ನಿಬಂಧನೆಗಳನ್ನು ಪಾಲಿಸುತ್ತಾ ನಿರ್ವಹಿಸಲು ಪ್ರಯತ್ನಿಸಬೇಕು. ನಿದ್ರೆಯನ್ನೂ ತಮ್ಮ ವ್ಯಾಪಾರವನ್ನೂ ತ್ಯಾಗಮಾಡಿಕೊಂಡು ಸಮಯನಿಷ್ಠೆಯೊಂದಿಗೆ ಅನುಷ್ಠಿಸಲು ಪ್ರಯತ್ನಿಸಬೇಕು. ಅಲ್ಲಾಹನ ಮೇಲಿನ ಭಯವನ್ನು ಹೃದಯದಲ್ಲಿ ಉಂಟುಮಾಡಬೇಕು.

ಕೆಲವರು ಸ್ವತಃ ಯಾವುದೇ ರೀತಿಯ ಕಷ್ಟತೆಗಳನ್ನು ಸಹಿಸಲು ತಯಾರಾಗುವುದಿಲ್ಲ ಮತ್ತು ಇತರರಿಂದ ದುಆ ಮಾಡಿಸುವುದರಿಂದ ಕಾರ್ಯ ಸಾಧಿಸಬಹುದು ಎಂದು ಭಾವಿಸುತ್ತಾರೆ. ಇಂತಹದ್ದೇ ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಒಬ್ಬ ವ್ಯಕ್ತಿಯೊಡನೆ ಹೀಗೆ ಹೇಳಿದರು: ನೀವು ಸ್ವತಃ ಶ್ರದ್ಧೆಯಿಂದ ದುಆ ಮಾಡಿದರೆ ಮಾತ್ರ ನಿಮಗಾಗಿ ನಾನು ಮಾಡುವ ದುಆಗಳು ಪರಿಣಾಮಕಾರಿಯಾಗುವುವು.

ಅಲ್ಲಾಹನು ನಮಗೆ ಏನು ನೀಡಿರುವನು, ಧರ್ಮದ ಪ್ರಯೋಜನವೇನು, ಧರ್ಮ ಮನುಷ್ಯನನ್ನು ಸೋಮಾರಿಯನ್ನಾಗಿ ಮಾಡುತ್ತದೆ, ಧರ್ಮ ಕಾಲ್ಪನಿಕ ಸಂಗತಿಗಳನ್ನು ಮೆದುಳಿನಲ್ಲಿ ಉಂಟುಮಾಡುತ್ತದೆ ಎಂಬೀ ಸಂಗತಿಗಳನ್ನು ಜನರ ಹೃದಯಗಳಿಗೆ ಹಾಕುವುದರ ಕಡೆಗೆ ಇತ್ತೀಚಿನ ದಿನಗಳಲ್ಲಿ ಧರ್ಮದ ಮತ್ತು ದೇವನ ವಿರೋಧಿಗಳ ಹಾಗೂ ನಾಸ್ತಿಕತೆಯನ್ನು ಬೆಂಬಲಿಸುವವರ ಗಮನ ಉಂಟಾಗಿದೆ. ಇಂತಹ ಸ್ಥಿತಿಯಲ್ಲಿ ಅಲ್ಲಾಹನೊಂದಿಗೆ ಸುದೃಢವಾಧ ಸಂಬಂಧ ಸ್ಥಾಪಿಸುವುದು ಪ್ರತಿಯೊಬ್ಬ ಅಹ್ಮದಿಯ ಕಡ್ಡಾಯ ಕರ್ತವ್ಯವಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಮ್ಮ ಜಮಾಅತಿನವರು ತಮ್ಮ ವಿಶ್ವಾಸ ವರ್ಧಿಸುವ ಆವಶ್ಯಕತೆಯಿದೆ. ಅವರಲ್ಲಿ ಅಲ್ಲಾಹನ ಮೇಲೆ ನಿಜವಾದ ದೃಢವಿಶ್ವಾಸ ಮತ್ತು ಪರಿಜ್ಞಾನ ಉಂಟಾಗಬೇಕು. ಸತ್ಕರ್ಮಗಳಲ್ಲಿ ಆಲಸ್ಯ ಮತ್ತು ಸೊಮಾರಿತನ ಇರಬಾರದು. ಏಕೆಂದರೆ, ಸೋಮಾರಿತನವಿದ್ದರೆ ತಹಜ್ಜುದ್ ನಮಾಝ್‌ಗಾಗಿ ಎದ್ದೇಳುವುದು ಬಿಡಿ, ಐದು ಹೊತ್ತಿನ ನಮಾಝ್ಗಾಗಿ ವುಝೂ಼ ಮಾಡುವುದೇ ಕಷ್ಟವಾಗಿ ಅನುಭವವಾಗುತ್ತದೆ. ನಿಮ್ಮೊಳಗೆ ಸತ್ಕರ್ಮಗಳನ್ನು ಮಾಡಲು ಶಕ್ತಿ ಉಂಟಾಗದಿದ್ದರೆ, ಸತ್ಕರ್ಮಗಳಲ್ಲಿ ಮುಂದಾಗಲು ಉತ್ಸಾಹವಿಲ್ಲದಿದ್ದರೆ, ಒಳಿತುಗಳನ್ನು ಮಾಡಲು ಆವೇಶವಿಲ್ಲದಿದ್ದರೆ ನಮ್ಮ ಜೊತೆಗೆ ಸಂಬಂಧ ಸ್ಥಾಪಿಸುವುದು ವ್ಯರ್ಥ.

ಒಟ್ಟಿನಲ್ಲಿ ನಾವು ಬಹಳ ಚಿಂತೆಯೊಂದಿಗೆ ಅತ್ಯುನ್ನತನಾದ ಅಲ್ಲಾಹನೊಂದಿಗೆ ನಮ್ಮ ಸಂಬಂಧವನ್ನು ವರ್ಧಿಸಲು ಪ್ರಯತ್ನಿಸಬೇಕಾಗಿದೆ. ಈ ನೈಜವಾದ ಸಂಬಂಧವಿದ್ದರೆ ಪ್ರಾರ್ಥನೆಗಳ ಸ್ವೀಕಾರದ ದೃಶ್ಯಗಳನ್ನು ಸಹ ನಾವು ನೋಡುವೆವು. ಅಲ್ಲಾಹನು ನಮಗೆ ಅದರ ಸೌಭಾಗ್ಯ ನೀಡಲಿ.

(ಖುತ್ಬದ ಕೊನೆಯಲ್ಲಿ ಪಾಕಿಸ್ತಾನ ಮತ್ತು ಅಲ್‌ಜೀರಿಯದ ಅಹ್ಮದಿಯರಿಗಾಗಿ ವಿಶೇಷವಾಗಿ ದುಅ ಮಾಡಬೇಕೆಂದು ಪ್ರಸ್ತಾಪಿಸುತ್ತಾ ಹುಝೂ಼ರ್ ಹೇಳಿದರು:) ಪಾಕಿಸ್ತಾನದಲ್ಲಿ ಅಹ್ಮದಿಯರಿಗೆ ತೊಂದರೆ ಕೊಡಲು ಪ್ರಯತ್ನಿಸಲಾಗುತ್ತಿದೆ. ಅದೇ ರೀತಿಯಲ್ಲಿ ಅಲ್‌ಜೀರಿಯದಲ್ಲೂ ಇತ್ತೀಚೆಗೆ ವಿರೋಧಿಗಳಲ್ಲಿ ಪುನಃ ತೀವ್ರತೆ ಉಂಟಾಗಿದೆ. ಅಲ್ಲಾಹನು ಪ್ರತಿಯೊಂದು ಜಾಗದಲ್ಲೂ ಪ್ರತಿಯೊಬ್ಬ ಅಹ್ಮದಿಯನ್ನು ಸಂರಕ್ಷಿಸಲಿ, ಪ್ರತಿಯೊಂದು ಕಷ್ಟದಿಂದ ರಕ್ಷಿಸಲಿ ಹಾಗೂ ವಿರೋಧಿಗಳನ್ನು ಪರಾಜಿತಗೊಳಿಸಲಿ. ಆಮೀನ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis**(atba)*

*At, **'Masjid Mubarak',** Islamabad, Tilford, UK, on 16-12-2022*


**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon